† ಶ್ರೀ ಮಲ್ಲಿಕಾರ್ಜುನ ಖಾರ್ಗೆ :—ಹಿಂದೆ, 1-1-1970ರಲ್ಲಿ ಯಾರು ಪದವೀಧರರಾಗಿದ್ದಾರೆ, ಅವರಿಗೆ ನಾಲ್ಕು ಇಂಕ್ರಿಮೆಂಟ್ ಕೊಡುತ್ತಿದ್ದರು. ಏಕೆಂದರೆ ಆಗ 80ರಿಂದ 50 ರೂಪಾಯಿ ಸ್ಕೇಲ್‌ನಲ್ಲಿ ಇರತಕ್ಕವರಿಗೆ ಪ್ರತಿವರ್ಷ ಮೂರು ರೂಪಾಯಿಯಂತೆ ನಾಲ್ಕು ಇಂಕ್ರಿಮೆಂಟ್ ಕೊಟ್ಟರೆ 12 ರೂಪಾಯಿ ಆಗುತ್ತಿತ್ತು. ಈಗ 120 ರಿಂದ 240 ರೂಪಾಯಿ ಸ್ಕೇಲನಲ್ಲಿ ಪ್ರತಿವರ್ಷ 5 ರೂಪಾಯಿ ಮುಂಗಡ ಮುಂಬಡ್ತಿ ಲೆಕ್ಕ ಹಾಕಿದರೆ 20 ರೂಪಾಯಿ ಬರುತ್ತದೆ. ಇದರಿಂದಾಗಿ ವ್ಯತ್ಯಾಸವಾಗುತ್ತದೆ. ಆದಕ್ಕಾಗಿ ಯಾವ ಯಾವ ಸಂದರ್ಭದಲ್ಲಿ ಸೀನಿಯರ್ ಮತ್ತು ಜೂನಿಯರ್ ಟೀಚರ್ಸ್‌ಗಳಿಗೆ ಬೇ ಹೆಚ್ಚು ಕಡಿಮೆ ಇದ್ದರೆ, ಪ್ರತಿ ಕೇಸನ್ನು ಮೆರಿಟ್ ಮೇಲೆ ಪರಿಶೀಲನೆ ಮಾಡಿ ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್ ಅಪ್ಪಣೆ ಪಡೆದು ಅಂತಹ ಕೇಸನ್ನು ಪರಿಶೀಲನೆ ಮಾಡುತ್ತಿದ್ದೇವೆ.

SRI P. M. BANGI.—As per G. O. No. FD 123 SRP 73 (3) 74, dated 3rd January 1975, in cases where the juniors had the benefit of the four advance increments that amount to more than Rs. 12 p.m. but limited to Rs. 25 resulting in their getting a pay higher than their seniors, such cases will be considered on merits by the Heads of Departments ಎಂದು ಇದೆ ಇದಕ್ಕೆ ಅನುಸಾರವಾಗಿ ಬಿಜಾಪುರ ಎರಿಯಾದಲ್ಲಿ 54 ಸೀನಿಯರ್ ಪ್ರೈಮರಿ ಸ್ಕೂಲ್ ಟೀಚರ್ಸ್ ಮತ್ತೆ ಜವುಖಂಡಿ, ಮಾಧೋಳ ಎರಿಯಾದಲ್ಲಿ 26 ಸೀನಿಯರ್ ಟೀಚರ್ ಮತ್ತೆ ಬಿಜಾಪುರ ಸಿಟಿ ರೇಂಜ್ ಏರಿಯಾದಲ್ಲಿ 17 ಗ್ರಾಜ್ಯುಯೇಟ್ ಟೀಚರ್ಸ್ ಒಟ್ಟಾಗಿ 97 ಜನ ಟೀಚರ್ಸ್‌ಗಳು ಡಿ. ಪಿ. ಐ. ಅವರಿಗೆ ರೆಪ್ರಸೆಂಟೇಷನ್ ಮಾಡಿದಾಗ ಅವರಿಗೆ ಪರಿಹಾರ ಸಿಕ್ಕಿಲ್ಲ, ಇದು ನಿಜವೇ ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ :—ಈ ಪ್ರಶ್ನೆ ಎಲ್ಲರಿಗೂ ಅನ್ವಯಿಸುತ್ತದೆ ಇವೊತ್ತು ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡತಕ್ಕವರಿಗೂ, ಎಜ್ಯುಕೇಷನ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡತಕ್ಕವರಿಗೂ ಇದೇ ರೀತಿ ಇತರ ಅನೇಕ ವಿಧವಾದ ಡಿವಾರ್ಟ್‌ಮೆಂಟ್‌ಗಳಲ್ಲಿ ಕೆಲಸ ಮಾಡತಕ್ಕವರಿಗೂ ಅನ್ವಯಿಸತಕ್ಕಂಥಹ ಜನರಲ್ ಆರ್ಡರ್ ಇದೆ. ಇದನ್ನು ರಿವೈಸ ಮಾಡತಕ್ಕಂತಹ ಕೆಲಸವನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ತೆಗೆದುಕೊಳ್ಳಬೇಕಾಗಿರುತ್ತದೆ. ಈಗ ನಿರ್ದಿಷ್ಟವಾಗಿ ಕೇಸ್ ಕೊಟ್ಟಿದ್ದಾ ಏನೆದೆ ಅದನ್ನು ನಾವು ನಮ್ಮ ಡಿಪಾರ್ಟ್‌ಮೆಂಟಿನಿಂದ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಕಳುಹಿಸಿ ಅದನ್ನು ಮಾಡಿ ಕೊಡುತ್ತೇವೆ.

1-30 P M.

## Unauthorised cultivation of Government Tank bed in Anekal Constituency.

265 SRI M. B. RAMASWAMY (Anekal).—Will the Minister for Revenue be pleased to state :—

(a) whether the Ex-M.L.A. of Anekal Constituency has converted the Government Tank into wet land ;

(b) if so, the extent of such land that has been unauthorisedly cultivating :

(c) whether surrounding villagers have lodged a complaint with the Government in this matter ;

(d) if so, the action taken ;

(e) the extent of tank bed land (burial grounds, gundu thope) under unauthorised cultivation by persons other than the Ex-M.L.A.

SRI N. HUTCHMASTHY GOWDA.—(Minister for Revenue)—

(*a*) His relations have unauthorisedly occupied Government tank bed and converted it into wet land.

(*b*) 8-00 acres

(*c*) Yes

(*d*) Action is being taken for eviction of unauthorised occupants.

(*e*) 24 acres 20 guntas tank bed and 8-23 guntas gundu thope in Jigale Village.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ನಮ್ಮ ಮೊದಲನೇ ಪ್ರಶ್ನೆಗೆ ರಿಲೇಟೀವ್ಸ್ ಎಂದು ಹೇಳಿದ್ದೀರಿ. ಸಂಬಂಧೀಕರು ಎಂದರೆ ಯಾರು ಯಾರು, ಎಂಬುದನ್ನು ಹೇಳುತ್ತೀರಾ ಸ್ವಾಮಿ ?

† ಶ್ರೀ ಎನ್ ಹುಚ್ಚಮಾಸ್ತಿಗೌಡ —ಇದರಲ್ಲಿ ಸಂಬಂಧೀಕರು ಎಂದರೆ ಕುಟುಂಬದ ಸದಸ್ಯರೂ ಇರಬಹುದು, ಹೊರಗಿನವರೂ ಇರಬಹುದು

ಶ್ರೀ ಎಂ. ಬಿ. ರಾಮಸ್ವಾಮಿ —ಸ್ವಾಮಿ, "ಬಿ"ಗೆ ಉತ್ತರವಾಗಿ 8 ಎಕರೆಗಳು ಎಂದು ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಇದು 8 ಎಕರೆಗಳಿಗಿಂತಲೂ ಹೆಚ್ಚಿಗೆ ಇಲ್ಲವೆ ? ಅಥವಾ ತಮ್ಮ ಅಧಿಕಾರಿಗಳು ಒದಗಿಸಿರುವ ಉತ್ತರ ಸರಿಯಾಗಿದೆಯೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ —ಸರ್ಕಾರಕ್ಕೆ ಬಂದಿರುವ ವರದಿಯ ಪ್ರಕಾರ ನಾನು ತಮಗೆ ಉತ್ತರವನ್ನು ಕೊಟ್ಟಿದ್ದೇನೆ ತಮ್ಮ ಲೆಕ್ಕದ ಪ್ರಕಾರ ಬೇರೆಯವರು ಎಂದರೆ ಎಷ್ಟೆಷ್ಟು ದೂರದ ಸಂಬಂಧಿಗಳು ಇರಬಹುದೆಂಬುದನ್ನು ಅಧಿಕಾರಿಗಳು ದೃಷ್ಟಿಯಲ್ಲಿಟ್ಟುಕೊಂಡು ಈ ಪಟ್ಟಿಯನ್ನು ಕಳುಹಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಸಂಬಂಧಿಗಳು ಎಂದು ಹೇಳಿದೆ. ಇವರೂ ಸೇರಿದಂತೆ ಒಟ್ಟು 23 ಜನ ಬಗರ್‌ಹುಕುಂ ಸಾಗುವಳಿಯನ್ನು ಮಾಡಿದ್ದಾರೆಂದು ನನಗೆ ಪಟ್ಟಿ ಬಂದಿದೆ. ಆದರೆ ಇವರು ಎಷ್ಟು ಹತ್ತಿರದ ಸಂಬಂಧಿಗಳು ಎಂಬುದನ್ನು ನಾನು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.— ಸ್ವಾಮಿ, ತಮ್ಮ ಉತ್ತರದಲ್ಲಿ "ಅಕ್ರಮವಾಗಿ ಸ್ವಾಧೀನಪಡಿಸಿಕೊಂಡ ವ್ಯಕ್ತಿಗಳನ್ನು ಹೊರದೂಡಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ" ಎಂದು ಹೇಳಿದ್ದೀರಿ. ಈ ಅಕ್ರಮ ಸಾಗುವಳಿ ಕಳೆದ 5-6 ವರ್ಷಗಳಿಂದ ನಡೆದಿದೆಯೆಂದು ಗ್ರಾಮಸ್ಥರು ದೂರು ಕೊಟ್ಟಿದ್ದು ಯಾವಾಗ ? ಇದು ಸರ್ಕಾರದ ಗಮನಕ್ಕೆ ಬಂದಿದ್ದು ಯಾವಾಗ ? ಇವರನ್ನು ಹೊರದೂಡಲು ತಾವು ಕ್ರಮ ತೆಗೆದುಕೊಂಡಿದ್ದು ಯಾವಾಗ ? ಈ ಕಾರ್ಯ ಪೂರ್ಣವಾಗಿದೆಯೇ ಅಥವಾ ಅರ್ಧಂಬರ್ಧ ಆಗಿದೆಯೇ ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಈ ಬಗರ್‌ಹುಕುಂ ಸಾಗುವಳಿ ಕಳೆದ 25 ವರ್ಷಗಳಿಂದ ಇದೆಯೆಂದು ವರದಿ ಇದೆ. ಆದರೆ ಇದರಲ್ಲಿ ಯಾರು ಯಾರು ಎಷ್ಟೆಷ್ಟು ವರ್ಷಗಳಿಂದ ಈ ರೀತಿ ಸಾಗುವಳಿ ಮಾಡುತ್ತಿದ್ದಾರೆಂಬ ವಿವರ ನನ್ನಲ್ಲಿಲ್ಲ. ಇನ್ನು ಮಾನ್ಯ ಸದಸ್ಯರಿಗೇ ಗೊತ್ತಿರುವಂತೆ ಈ ರೀತಿ ಅಕ್ರಮ ಸಾಗುವಳಿಯನ್ನು ಯಾರು ಯಾರು ಮಾಡುತ್ತಿದ್ದಾರೆ ಅಂಥವರನ್ನು ಹೊರದೂಡಲು ಲ್ಯಾಂಡ್ ರೀ ಫಾರಂಸ್ ಆಕ್ಟನಲ್ಲಿ ತಿದ್ದುಪಡಿಯನ್ನು ಮಾಡಿದ್ದೇವೆ ಈ ತಿದ್ದುಪಡಿಯನ್ನು ಮಾಡಿದಮೇಲೆ ಅವರನ್ನು ಅಲ್ಲಿಂದ ಹೊರದೂಡಲು ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಬಿ ರಾಮಸ್ವಾಮಿ.—ಸ್ವಾಮಿ, "ಇ"ಗೆ ಉತ್ತರವಾಗಿ ಜಿಗಳೆ ಗ್ರಾಮದಲ್ಲಿ 24 ಎಕರೆ ಗುಂಟೆ ಕೆರೆ ಅಂಗಳದ 20 ಗುಂಟೆಗಳನ್ನು ಹಾಗೂ 8-23 ಗುಂಟೆ ತೋಪಿನ ಜಮೀನನ್ನು ಎಂದು ಉತ್ತರವನ್ನು ಕೊಟ್ಟಿದ್ದೀರಿ. ಇವರಲ್ಲಿ ಎಲ್ಲೆಲ್ಲಿ ಯಾರ್ಯಾರು ಎಷ್ಟೆಷ್ಟು ಜನ ಇದ್ದಾರೆಂಬುದನ್ನು ಹೇಳುವುದಕ್ಕಾಗುತ್ತದೆಯೆ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—3ನೇ ಸರ್ವೆ ನಂಬರ್‌ನಲ್ಲಿ ಒಂದು, 63ನೇ ಸರ್ವೆ ನಂಬರ್‌ನಲ್ಲಿ 14 ಜನ, 64ನೇ ಸರ್ವೆ ನಂಬರ್‌ನಲ್ಲಿ 9 ಜನ, 31ನೇ ಸರ್ವೆ ನಂಬರ್‌ನಲ್ಲಿ ಒಬ್ಬರು, ಇದೇ ಅಲ್ಲದೆ 30 ನೇ ಸರ್ವೆ ನಂಬರ್‌ನಲ್ಲಿ ಒಬ್ಬರು ಹೀಗೆ ಅಕ್ರಮ ಸಾಗುವಳಿಯನ್ನು ಮಾಡಿದ್ದಾರೆ.